ಸಾಕ್ಷಿ ಯನ್ನು ದಿಃ 06.02.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ದೂರುದಾರರ ಪರ ವಕೀಲರಿಂದ**

1. ಹುಣಸೂರು ಬಿ.ಎಂ ರಸ್ತೆ, ಬಸ್ ಡಿಪೋ ಎದುರು, ಡ್ರೀಮ್ ಲ್ಯಾಂಡ್ ಎದುರು, ಮಲ್ಲಪ್ಪನವರ ಮಗ ರಂಗಮಲ್ಲಯ್ಯ ಎಂದರೆ ನೀವೆ ಎಂದರೆ, ಬಸ್ ಡಿಪೋ ಎದುರು ಬರುವುದಿಲ್ಲ, ಡ್ರೀಮ್ ಲ್ಯಾಂಡ್ ಎದುರು ಬರುತ್ತದೆ.
2. ಹೆಚ್.ಎನ್.ಮಲ್ಲಪ್ಪನವರ ಮಗ ರಂಗಮಲ್ಲಯ್ಯ ಹುಣಸೂರು ಬಿ.ಎಂ ರಸ್ತೆ, ಬಸ್ ಡಿಪೋ ಎದುರು, ಡ್ರೀಮ್ ಲ್ಯಾಂಡ್ ಎದುರು ಸದರಿ ವಿಳಾಸಕ್ಕೆ ನಿಮಗೆ ತಿಳುವಳಿಕೆ ಪತ್ರ ಬಂದಿತ್ತು, ನೀವು ಅದನ್ನು ಸ್ವೀಕರಿಸಿದ್ದೀರಿ ಎಂದರೆ ಸರಿ.
3. ಸಾಮಾನ್ಯವಾಗಿ ಯಾವುದೇ ಪತ್ರ ವ್ಯವಹಾರಕ್ಕೆ ನೀವು ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತೀರಿ ಎಂದರೆ ಸರಿ.
4. ನಾನು ಪಿಯುಸಿ ವ್ಯಾಸಂಗ ಮಾಡಿದ್ದೇನೆ.
5. ನೊಟೀಸು ಸ್ವೀಕರಿಸಿದ ನಂತರ ನಾನು ಪ್ರತ್ಯುತ್ತರ ಸಹ ನೀಡಿದ್ದೇನೆ. 2021 ರಲ್ಲಿ ನೀಡಿದ್ದೇನೆ. ನೀವು ಯಾವುದೇ ಪ್ರತ್ಯುತ್ತರ ನೀಡಿಲ್ಲ ಎಂದರೆ ಸರಿಯಲ್ಲ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ.
6. ನಾನು ಗಂಗಾ ಜಲ ಎಂಬ ಹೆಸರಿನಲ್ಲಿ ನೀರಿನ ವ್ಯಾಪಾರ ಮಾಡುತ್ತೇನೆ. ಆ ಬಗ್ಗೆ ಯಾವುದೇ ದಾಖಲೆ ನೀಡಿಲ್ಲ.
7. ಕರ್ನಾಟಕ ಬ್ಯಾಂಕ್ ಹುಣಸೂರು ಚೆಕ್ ನಂ.643819 ನಿಮ್ಮದೇ ಎಂದರೆ, ಸರಿ. ಸದರಿ ಚೆಕ್ಕಿನ ಆಧಾರದ ಮೇಲೆ ದೂರುದಾರರು ನಿಮಗೆ ತಿಳುವಳಿಕೆ ಪತ್ರ ನೀಡಿದ್ದಾರೆ ಎಂದರೆ, ಸರಿ ಅದಕ್ಕೆ ಉತ್ತರ ನೀಡಿದ್ದೇನೆ.
8. ನೀವು ಯಾವುದೇ ನೀರಿನ ವ್ಯಾಪಾರ ಮಾಡುವುದಿಲ್ಲ, ಶುಂಠಿ ವ್ಯಾಪಾರ ಮಾಡುತ್ತೀರಿ ಎಂದರೆ ಸರಿಯಲ್ಲ. ಅದರ ಜೊತೆಗೆ ಹಲವಾರು ವ್ಯಾಪಾರ ಮಾಡಿ ನೀವು ಹಲವಾರು ಜನಕ್ಕೆ ಮೋಸ ಮಾಡಿದ್ದೀರಿ ಎಂದರೆ ಸರಿಯಲ್ಲ.
9. ನೀವು ದೂರುದಾರರಿಂದ 2020 ರಲ್ಲಿ 2000 ಮೂಟೆ ಶುಂಠಿ ಪಡೆದು ಅವರಿಗೆ ಚೆಕ್ ನೀಡಿದ್ದೀರಾ ಎಂದರೆ ಸರಿಯಲ್ಲ.
10. ನಿಡಿ -1 ರ ಸಹಿ ನನ್ನದೇ.

11. ನಿಪಿ - 1 ರ ಚೆಕ್ ಮೇಲಿರುವ ಸಹಿ ನನ್ನದಲ್ಲ.
12. ಸಾಕ್ಷಿಯು ತನ್ನ ಆರೋಪಣೆ ಹಾಗೂ 313 ಹೇಳಿಕೆಯಲ್ಲಿನ ಸಹಿಗಳು ತನ್ನ ಸಹಿಗಳು ಎಂದು ಒಪ್ಪಿರುತ್ತಾರೆ.
13. ದೂರುದಾರರ ಜೊತೆ ಶುಂಠಿ ವ್ಯಾಪಾರ ಮಾಡಿ ಅವರಿಗೆ ನೀವು ನಿಪಿ - 1 ರ ಚೆಕ್ಕನ್ನು ಸಹಿ ಮಾಡಿ ನೀಡಿದ್ದೀರಾ ಎಂದರೆ, ಅವರು ನನಗೆ ಪರಿಚಯ ಇಲ್ಲ.
14. ದೂರುದಾರರ ಬಳಿ ಯಾವ ಕಾರಣಕ್ಕೆ ಚೆಕ್ ಹೋಗಿದೆ ಎಂದು ನನಗೆ ಗೊತ್ತಿಲ್ಲ. ಅವರ ಬಳಿ ಚೆಕ್ ಇದೆ ಎಂಬ ವಿಚಾರ ನನಗೆ ನೊಟೀಸು ಬಂದ ನಂತರ ಗೊತ್ತಾಗಿರುತ್ತದೆ. ನಂತರ ಅವರ ವಿರುದ್ಧ ಚೆಕ್ ದುರುಪಯೋಪಡಿಸಿಕೊಂಡಿದ್ದಾರೆ ಎಂದು ನಾನು ದೂರು ನೀಡಿಲ್ಲ. ದೂರು ನೀಡಲು ತೊಂದರೆ ಇತ್ತಾ ಎಂದರೆ, ನಾನು ಸರಿಯಾಗಿ ಚೆಕ್ ನೋಡಿರಲಿಲ್ಲ ಎಂದು ನುಡಿಯುತ್ತಾರೆ.
15. ದೂರುದಾರರು ನಿಮಗೆ ಮೊದಲಿನಿಂದಲೂ ನಿಮಗೆ ಪರಿಚಯ ಇದ್ದರೂ ಪರಿಚಯ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
16. 2020 ಕ್ಕಿಂತ ಹಿಂದೆ ಸಹ ನೀವು ದೂರುದಾರರ ಜೊತೆ ಶುಂಠಿ ವ್ಯಾಪಾರ ಮಾಡಿದ್ದೀರಾ ಎಂದರೆ ಸರಿಯಲ್ಲ. ಅವರಿಗೆ ಸುಮಾರು 8-10 ಎಕರೆ ಜಮೀನು ಇದ್ದು ಅವರು ಬೆಳೆದ ಶುಂಠಿಯನ್ನು ನೀವು ಖರೀದಿ ಮಾಡುತ್ತೀರಾ ಎಂದರೆ ಸರಿಯಲ್ಲ.
17. ಹುಣಸೂರು ಟೌನಿನ ಗಫಾರ್ ಶರೀಫ್ ರವರಿಗೆ ಸಹ ನೀವು ಮೋಸ ಮಾಡಿದ್ದು, ಅವರು ನಿಮ್ಮ ಮೇಲೆ ದೂರು ನೀಡಿದ್ದಾರೆ ಎಂದರೆ, ಸರಿ ಆದರೆ ನಾನು ಮೋಸ ಮಾಡಿಲ್ಲ ಎಂದು ನುಡಿಯುತ್ತಾರೆ.
18. ದೂರುದಾರರಿಗೆ ನೀವು ನಿಪಿ - 1 ರ ಬಾಬ್ತು ಹಣ ನೀಡಬೇಕಾಗಿದ್ದರೂ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
19. ದೂರುದಾರರಿಗೆ ಹಣ ವಾಪಸ್ ನೀಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
20. ಶುಂಠಿ ವ್ಯವಹಾರ ನಡೆದಾಗ ಸೈಯದ್ ಅಬ್ಬಾಸ್ ಸಹ ಇದ್ದರು ಎಂದರೆ ಸರಿಯಲ್ಲ. ನಾನು ಅವರನ್ನು ನೋಡಿಲ್ಲ. ಸದರಿ ಸೈಯದ್ ಅಬ್ಬಾಸ್ ಹಾಗೂ ದೂರುದಾರರು ನಿಮಗೆ ಪರಿಚಯ ಇದ್ದಾರೆ ಎಂದರೆ ಸರಿಯಲ್ಲ.

21. ನಿಮ್ಮ ವಿರುದ್ಧ ಅಬ್ದುಲ್ ವಹಾಬ್ ಖಾನ್ ರವರು ಸಹ ಮೋಸ ಮಾಡಿದ್ದೀರಾ ಎಂದು ದೂರು ನೀಡಿದ್ದೀರಾ ಎಂದರೆ ಅವರು ಗಫಾರ್ ಶರೀಫ್ ರವರ ಮಗ ಎಂದು ನುಡಿಯುತ್ತಾರೆ.
22. ನೀವು ಹಲವಾರು ಜನರಿಗೆ ಮೋಸ ಮಾಡಿದ್ದು ನಿಮ್ಮ ವಿರುದ್ಧ ದೂರು ನೀಡಿದ್ದಾರೆ ಎಂದರೆ ಸರಿಯಲ್ಲ.
23. ದೂರುದಾರರಿಗೆ ನೀವು ನೀಡಿದ ಚೆಕ್ಕನ್ನು ಅಬ್ಬೂರು ಶಾಖೆಗೆ ನಗದೀಕರಕ್ಕೆ ಹಾಜರುಪಡಿಸಿರುತ್ತಾರೆ ಎಂದರೆ ನಾನು ಯಾವುದೇ ಚೆಕ್ ನೀಡಿಲ್ಲ. ಸದರಿ ವಿಚಾರ ಅವರು ನಿಮಗೆ ತಿಳಿಸಿದಾಗ ನೀವು ಬಗೆಹರಿಸಿಕೊಡುತ್ತೇನೆ ಎಂದು ಹೇಳಿದ್ದೀರಿ ಎಂದರೆ ಸರಿಯಲ್ಲ.
24. ದೂರುದಾರರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ